# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103 ☎:0816-2255850,2273511ಫ್ಯಾಕ್ಸ್:0816-2270719

ಸಂಖ್ಯೆ:ತು.ವಿ.:ಪ.ವಿ.:2022-23 /365 ದಿನಾಂಕ:16.08.2022

## ಪರಿಷ್ಕೃತ ಅಧಿಸೂಚನೆ

ಕೋವಿಡ್ – 19 ರ ಸಂದರ್ಭಕ್ಕನುಗುಣವಾಗಿ ಯುಜಿಸಿ ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ನಿರ್ದೇಶನಗಳನ್ವಯ ಮೊದಲನೇ ಮತ್ತು ಮೂರನೇ ಸೆಮಿಸ್ಟರ್ ಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಎರಡನೇ ಮತ್ತು ನಾಲ್ಕನೇ ಸೆಮಿಸ್ಟರಿನ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಅಧಿಸೂಚನೆಯ ಅನ್ವಯ ನಿಗದಿತ ದಿನಾಂಕದೊಳಗೆ ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಎರಡು ಮತ್ತು ನಾಲ್ಕನೇ ಸೆಮಿಸ್ಟರಿನಲ್ಲಿ ತೇರ್ಗಡೆಗೊಳಿಸಲಾಗಿದೆ / ಉನ್ನತೀಕರಣಗೊಳಿಸಲಾಗಿದೆ. ಸದರಿ ಕ್ರಮವನ್ನು ಒಂದು ಮತ್ತು ಮೂರನೇ ಸೆಮಿಸ್ಟರಿನ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದಂತಹ ವಿದ್ಯಾರ್ಥಿಗಳಿಗೆ ಪದವಿ ಮುಗಿಸಬೇಕಾದ ನಿಗದಿತ ಅವಧಿಗಿಂತ ಒಂದು ವರ್ಷ ಹೆಚ್ಚುವರಿಯಾಗಿ (ಮೂರು ವರ್ಷಗಳಲ್ಲಿ ಪೂರ್ಣಗೊಳಿಸಬೇಕಾಗಿರುವ ಪದವಿಗೆ ಹೆಚ್ಚುವರಿಯಾಗಿ ಒಂದು ವರ್ಷ ಅಂದರೆ ನಾಲ್ಕು ವರ್ಷಗಳ ಅವಧಿಯೊಳಗೆ) ಸಮಯವನ್ನು ವಿಸ್ತರಿಸಿ ಉತ್ತೀರ್ಣರಾಗಲು ಅವಕಾಶ ಕಲ್ಪಿಸಲಾಗಿದೆ.

ಪದವಿಯ ಅವಧಿ ಅಂದರೆ ಮೂರು ವರ್ಷಗಳ ಒಳಗಾಗಿ ಅಥವಾ ಹೆಚ್ಚುವರಿ ಒಂದು ವರ್ಷದೊಳಗೆ (Additional one year) ಉತ್ತೀರ್ಣರಾದಲ್ಲಿ ಎರಡು ಮತ್ತು ನಾಲ್ಕನೇ ಸೆಮಿಸ್ಟರಿನ ಪರೀಕ್ಷೆಗಳಲ್ಲಿ ತೇರ್ಗಡೆಗೊಳಿಸಲಾಗುತ್ತದೆ ಹಾಗೂ ಈ ಅವಕಾಶವೂ ಸಹಾ ಒಂದು ಬಾರಿಗೆ ( one time measure ) ಮಾತ್ರ ಅನ್ವಯಿಸುತ್ತದೆ. ಈ ಕೋವಿಡ್ 19ರ ತೇರ್ಗಡೆಗೊಳಿಸಲಾದ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಆಯಾ ಕಾಲಕಾಲಕ್ಕೆ ಹೊರಡಿಸಲಾದ ಪರೀಕ್ಷಾ ಶುಲ್ಕ ಅಧಿಸೂಚನೆಯನ್ವಯ ಕೊನೆಯ ದಿನಾಂಕದೊಳಗೆ ಪರೀಕ್ಷಾ ಶುಲ್ಕವನ್ನು ಪಾವತಿಸದ ವಿದ್ಯಾರ್ಥಿಗಳು ದಿನಾಂಕ 20/9/2022 ರೊಳಗೆ ನಿಗದಿತ ಪರೀಕ್ಷಾ ಶುಲ್ಕದೊಂದಿಗೆ ಹೆಚ್ಚುವರಿಯಾಗಿ ರೂ. 650 ರ ವಿಶೇಷ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಲು ಸೂಚಿಸಿದೆ.

ಸದರಿ ಕ್ರಮವನ್ನು ಸ್ನಾತಕೋತ್ತರ ಮತ್ತು ಸ್ನಾತಕ ಶಿಕ್ಷಣ ವಿಭಾಗಗಳ ಮೊದಲನೇ ಸೆಮಿಸ್ಟರಿನ ಪರೀಕ್ಷೆಗಳಲ್ಲಿ ಅನು ತೀರ್ಣರಾದಂತಹ ವಿದ್ಯಾರ್ಥಿಗಳಿಗೂ ಸಹಾ ಮೇಲಿನಂತೆ ಕ್ರಮವಹಿಸಲು ಅವಕಾಶ ಕಲ್ಪಿಸಲಾಗಿದ್ದು ಮಾಹಿತಿಯನ್ನು ಸಂಬಂಧಪಟ್ಟ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ ಗಮನಕ್ಕೆ ತರುವಂತೆ ಪ್ರಾಂಶುಪಾಲರುಗಳಿಗೆ ಸೂಚಿಸಿದೆ.

**ವಿಶೇಷ ಸೂಚನೆ**:ಪರೀಕ್ಷಾ ಶುಲ್ಕ ಪಾವತಿಸದ ವಿದ್ಯಾರ್ಥಿಗಳಿಗೆ ಮಾತ್ರ ಹೆಚ್ಚುವರಿಯಾಗಿ ರೂ. 650 ರ ವಿಶೇಷ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳುವುದು. ಈಗಾಗಲೇ ಪರೀಕ್ಷಾ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳಿಗೆ ಇದು ಅನ್ವಯಿಸುವುದಿಲ್ಲ (2020 ಮತ್ತು 2021 ರಲ್ಲಿ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳಿಗೆ ).

ಕುಲಸಚಿವರು(ಮೌಲ್ಯಮಾಪನ)

# ಕೋವಿಡ್ – 19 ರ ಕಾರಣದಿಂದಾಗಿ ತೇರ್ಗಡೆಗೊಳಿಸಲು ಅನ್ವಯಿಸುವ ಶೈಕ್ಷಣಿಕ ಸಾಲು ಮತ್ತು ಸೆಮಿಸ್ಟರಿನ ವಿವರ

| ಕ್ರ .ಸಂ. | ವಿದ್ಯಾರ್ಥಿ ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದ ಶೈಕ್ಷಣಿಕ ಸಾಲು(UG) | ತೇರ್ಗಡೆಗೆ ಅರ್ಹರಾದ ಸೆಮಿಸ್ಟರಿನ ವಿವರ | ಯಾವ ಶೈಕ್ಷಣಿಕ ಸಾಲಿನವರೆಗೂ ಅವಕಾಶ ಕಲ್ಪಿಸಲಾಗಿದೆ | ಷರಾ |
|---|---|---|---|---|
| 1 | 2018–19 | 4ನೇ ಸೆಮಿಸ್ಟರ್ | 2022–23 ನೇ ಶೈಕ್ಷಣಿಕ ಸಾಲು | |
| 2 | 2019–20 | 2ನೇ & 4ನೇ ಸೆಮಿಸ್ಟರ್ | 2022–23 ನೇ ಶೈಕ್ಷಣಿಕ ಸಾಲು | |
| 3 | 2020–21 | 2ನೇ ಸೆಮಿಸ್ಟರ್ | 2023–24 ನೇ ಶೈಕ್ಷಣಿಕ ಸಾಲು | |

| ಕ್ರ .ಸಂ. | ವಿದ್ಯಾರ್ಥಿ ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದ ಶೈಕ್ಷಣಿಕ ಸಾಲು(PG) | ತೇರ್ಗಡೆಗೆ ಅರ್ಹರಾದ ಸೆಮಿಸ್ಟರಿನ ವಿವರ | ಯಾವ ಶೈಕ್ಷಣಿಕ ಸಾಲಿನವರೆಗೂ ಅವಕಾಶ ಕಲ್ಪಿಸಲಾಗಿದೆ | ಷರಾ |
|---|---|---|---|---|
| 1 | 2019–20 | 2ನೇ ಸೆಮಿಸ್ಟರ್ | 2021–22 ನೇ ಶೈಕ್ಷಣಿಕ ಸಾಲು | |
| 2 | 2020–21 | 2ನೇ ಸೆಮಿಸ್ಟರ್ | 2022–23 ನೇ ಶೈಕ್ಷಣಿಕ ಸಾಲು | |

| ಕ್ರ .ಸಂ. | ವಿದ್ಯಾರ್ಥಿ ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದ ಶೈಕ್ಷಣಿಕ ಸಾಲು(UG-B.Ed.) | ತೇರ್ಗಡೆಗೆ ಅರ್ಹರಾದ ಸೆಮಿಸ್ಟರಿನ ವಿವರ | ಯಾವ ಶೈಕ್ಷಣಿಕ ಸಾಲಿನವರೆಗೂ ಅವಕಾಶ ಕಲ್ಪಿಸಲಾಗಿದೆ | ಷರಾ |
|---|---|---|---|---|
| 1 | 2019–20 | 2ನೇ ಸೆಮಿಸ್ಟರ್ | 2021–22 ನೇ ಶೈಕ್ಷಣಿಕ ಸಾಲು | |
| 2 | 2020–21 | 2ನೇ ಸೆಮಿಸ್ಟರ್ | 2022–23 ನೇ ಶೈಕ್ಷಣಿಕ ಸಾಲು | |